೭ ಹೊಸದಾಗಿ ಹಿಪ್ಪನೇರಳೆ ಬೆಳೆಸಲು ಪ್ರೋತ್ಸಾಹ ನೀಡುವ ಸಲುವಾಗಿ ಹಿಪ್ಪನೇರಳೆ ಬಿತ್ತನೆ ಕಡ್ಡಿಗಳನ್ನು ಮತ್ತು ಬೇಕಾದ ಗೊಬ್ಬರವನ್ನು ಒದಗಿಸುವುದು.

೮ ಸಂಮಾರು ೩೫೮ ಎಕರೆ ವಿಸ್ತೀರ್ಣದಲ್ಲಿ ೪೧೩ ರೇಷ್ಮೆ ಬೆಳೆಗಾರರು ರೇಷ್ಮೆ ವ್ಯವಸಾಯ ಕೈಗೊಂಡಿದ್ದು ಅವರಿಗೆ ಅಗತ್ಯವಾದ ತಾಂತ್ರಿಕ ಸೌಲಭ್ಯವನ್ನು ಒದಗಿಸುವುದು.

ವೀರಾಜಪೇಟೆ ತಾಲ್ಲೂಕು :

ಈ ತಾಲ್ಲೂಕಿನಲ್ಲಿ ಸುಮಾರು ೪೬ ಜನ ರೇಷ್ಮೆ ಬೆಳೆಗಾರರಿದ್ದು ಅವರಿಗೆ ಬೇಕಾದ ತಾಂತ್ರಿಕ ಸಲಹೆಯನ್ನು ಹಾಗೂ ಇತರ ಸೌಲಭ್ಯಗಳನ್ನು ಒದಗಿಸುವುದು.

ಮಡಿಕೇರಿ ತಾಲ್ಲೂಕು :

ಕೊಡಗು ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ರೇಷ್ಮೆ ಉದ್ಯಮದ ಕೆಲಸಗಳನ್ನು ನೋಡಿಕೊಳ್ಳಲು ಮತ್ತು ಎಲ್ಲಾ ಸೌಲಭ್ಯಗಳ ವ್ಯವಸ್ಥೆ ಮಾಡಲು ಸಹಾಯಕ ನಿರ್ದೇಶಕರ ಕಛೇರಿಯು ನಿರ್ವಹಣೆ ಮಾಡುತ್ತದೆ.

೫) ೧೯೭೨-೭೩ ರಿಂದ ೧೯೮೬-೮೭ರವರೆಗೆ ಕೊಡುಗು ಜಿಲ್ಲೆಯಲ್ಲಾ ಯೋಜನೆಗಳಲ್ಲಿ ಸುಮಾರು೫೫ ಲಕ್ಷ ರೂಪಾಯಿಗಳು ಖರ್ಚಾಗಿರುವುದು ಕಂಡುಬಂದಿದೆ

೬) ಗಿರಿಜನರಿಗೆ ಒದಗಿಸಿರುವ ಸೌಲಭ್ಯಗಳು :

೧ ಹೊಸದಾಗಿ ಹಿಪ್ಪನೇರಳೆ ಬೆಳೆಸಲು ಹಿಪ್ಪನೇರಳೆ ಬಿತ್ತನೆ ಕಡ್ಡಿ ಮತ್ತು ಗೊಬ್ಬರ ಮುಫತ್ತಾಗಿ ಒದಗಿಸಲಾಗಿದೆ.

೨ ರೇಷ್ಮೆ ವ್ಯವಸಾಯ ಮತ್ತು ಹುಳುಸಾಕಾಣಿಕೆಯಲ್ಲಿ ಶಿಷ್ಯ ವೇತನ ಕೊಟ್ಟು ತರಬೇತಿ ನೀಡಲಾಗಿದೆ.

೩ ಸಾಂಪ್ರದಾಯಿಕ ರೇಷ್ಮೆ ವ್ಯವಸಾಯದ ಪ್ರದೇಶಗಳಿಗೆ ರೇಷ್ಮೆ ಬೆಳೆಗಾರರನ್ನು ಪ್ರವಾಸ ಕರೆದುಕೊಂಡು ಹೋಗಲಾಗಿದೆ.

೪ ರೇಷ್ಮೆ ಹುಳು ಸಾಕುವ ಉಪಕರಣಗಳನ್ನು ಮುಫತ್ತಾಗಿ ಒದಗಿಸಲಾಗಿದೆ.

೫ ಗಿರಿಜನ ಕಾಲೋನಿಗಳಲ್ಲಿ ಸಾಮೂಹಿಕ ಹಿಪ್ಪನೇರಳೆ ತೋಟ ಬೆಳೆಸಿ ಹುಳು ಸಾಕಾಣಿಕೆಗೆ ಅವಕಾಶ ಮಾಡಿ ಕೊಡಲಾಗಿದೆ.

೬ ಗಿರಿಜನ ಕಾಲೋನಿಗಳಲ್ಲಿ ಚಾಕಿ ಸಾಕಾಣಿಕೆ ಕೇಂದ್ರದ ಕಟ್ಟಡ ಹಾಗೂ ನೀರಾವರಿ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿವೆ.

೭ ರೇಷ್ಮೆ ಬೆಳೆಗಾರರಿಗೆ ಬೇಕಾದ ತಾಂತ್ರಿಕ ಸಲಹೆಯನ್ನು ಒದಗಿಸಲಾಗಿದೆ ಇದಕ್ಕಾಗಿ ೧೯೮೧-೮೨ ರಿಂದ ೧೯೮೬-೮೭ರವರೆಗೆ ೧೬.೫೫ ಲಕ್ಷ ರೂಪಾಯಿಗಳು ಖರ್ಚಾಗಿದೆ.

ತರೀಕೆರೆ ಅರಣ್ಯ ಸಂಪತ್ತು ಕಳ್ಳ ಸಾಗಾಣಿಕೆಯ ಬಗ್ಗೆ

೬೧೬. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧೯೮೪-೮೫ ಮತ್ತು ೧೯೮೫-೮೬ನೇ ಸಾಲುಗಳಲ್ಲಿ ತರೀಕೆರೆ ತಾಲ್ಲೂಕಿನಲ್ಲಿ ಅರಣ್ಯ ಸಂಪತ್ತಿನ ಕಳ್ಳಸಾಗಾಣಿಕೆಯ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಅದರಿಂದ ಬಂದ ಆದಾಯ ವೆಷ್ಟು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ತರೀಕೆರೆ ತಾಲ್ಲೂಕಿನಲ್ಲಿ ಅರಣ್ಯ ಸಂಪತ್ತಿನ ಕಳ್ಳಸಾಗಾಣಿಕೆಯ ಪ್ರಕರಣಗಳನ್ನು ಪತ್ತೆ ಹಚ್ಚಿದ ವಿವರ ಈ ಕೆಳಗಿನಂತಿವೆ :

೧೯೮೬–೮೭	—೫೧೪ ಪ್ರಕರಣಗಳು
೧೯೮೭–೮೮ (೩೧–೮–೧೯೮೭ರವರೆಗೆ)	—೧೭೫ ಪ್ರಕರಣಗಳು

ಈ ಮೇಲಿನ ಪ್ರಕರಣಗಳಿಂದ ಬಂದ ಆದಾಯ ಈ ಕೆಳಗಿನಂತಿವೆ :

೧೯೮೬–೮೭ ಮತ್ತು ೧೯೮೭–೮೮ (ಆಗಸ್ಟ್‌ವರೆಗೆ) ವಸೂಲಾದ ಆದಾಯ ಕ್ರಮವಾಗಿ ರೂ. ೮೯,೪೧೨-೦೦ ಮತ್ತು ರೂ. ೬೦,೩೮೦-೫೦.

ರೈತರಿಗೆ ಸಸಿಗಳನ್ನು ಹಂಚಿರುವ ಬಗ್ಗೆ

೬೦೮. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲುಗಳಲ್ಲಿ ಹಂಚಿರುವ ಸಸಿಗಳ ಸಂಖ್ಯೆ ಎಷ್ಟು ಮತ್ತು ಯಾವ ರೈತರಿಗೆ ಉಚಿತವಾಗಿ ಹಾಗು ಯಾವ ಯಾವ ರೈತರಿಗೆ ಹಂಚಲಾಗಿದೆ.

ಆ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲುಗಳಲ್ಲಿ ಕಿಸಾನ್ ನರ್ಸರಿಯನ್ನು ಎಷ್ಟು ಕಡೆ ಕೈಗೊಳ್ಳಲಾಗಿದೆ.

ಇ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲುಗಳಲ್ಲಿ ತರೀಕೆರೆ ತಾಲ್ಲೂಕಿನಲ್ಲಿ ಶಾಲಾವನಗಳನ್ನು ಮಾಡಿರುವ ಸಂಖ್ಯೆ ಎಷ್ಟು ಹಾಗೂ ಇದಕ್ಕೆ ತಗಲಿದ ವೆಚ್ಚವೆಷ್ಟು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು.) —

ಅ) ರಾಜ್ಯದಲ್ಲಿ ೧೯೮೬–೮೭ ಮತ್ತು ೧೯೮೭–೮೮ರಲ್ಲಿ ಈ ಕೆಳಕಂಡಂತೆ ರೈತರಿಗೆ ಉಚಿತವಾಗಿ ಸಸಿಗಳನ್ನು ಹಂಚಲಾಗಿದೆ.

೧೯೮೬–೮೭	—	೯೭೦.೬೧ ಲಕ್ಷ.
೧೯೮೭–೮೮	—	೬೯೮ ೬೦ ಲಕ್ಷ (ಆಗಸ್ಟ್ ತಿಂಗಳ ಅಂತ್ಯದವರೆಗೆ).

ತರೀಕೆರೆ ತಾಲ್ಲೂಕಿನಲ್ಲಿ ಉಚಿತವಾಗಿ ರೈತರಿಗೆ ಹಂಚಲಾದ ಸಸಿಗಳ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ಆ) ರಾಜ್ಯದಲ್ಲಿ ೧೯೮೬–೮೭ನೇ ಸಾಲಿನಲ್ಲಿ ೧೫.೭೫ ಕೋಟಿ ಸಸಿಗಳನ್ನು ೬೩೧೦ ಫಲಾನುಭವಿಗಳ ಮಂಜೂರಾತರ ೬೩೮೦ ಸ್ಥಳಗಳಲ್ಲಿ ವಿಕೇಂದ್ರೀಕೃತ ಸಸ್ಯ ಕ್ಷೇತ್ರಗಳಲ್ಲಿ ಸಸಿಗಳನ್ನು ಬೆಳೆಸಲಾಗಿದೆ ಮತ್ತು ೧೯೮೭–೮೮ನೇ ಸಾಲಿನಲ್ಲಿ ೧೫ ೮೦ ಕೋಟಿ ಸಸಿಗಳನ್ನು ವಿಕೇಂದ್ರೀಕೃತ ಸಸ್ಯ ಕ್ಷೇತ್ರಗಳಲ್ಲಿ ೬೩೨೦ ಫಲಾನುಭವಿಗಳ ಮಂಜೂರಾತರ ೬೩೨೦ ಕಡೆಗಳಲ್ಲಿ ಸಸಿಗಳನ್ನು ಬೆಳೆಸಲು ಗುರಿ ಹೊಂದಿದೆ.

ತರೀಕೆರೆ ತಾಲ್ಲೂಕಿನಲ್ಲಿ :

೧) ೧೯೮೬–೮೭ನೇ ಸಾಲಿನಲ್ಲಿ ೧೯ ಸ್ಥಳಗಳಲ್ಲಿ ಕಿಸಾನ್ ನರ್ಸರಿ ಮಂಜೂರಾತರ ಸಸಿಗಳನ್ನು ಬೆಳೆಸಲಾಗಿದೆ. ಫಲಾನುಭವಿಗಳ ವಿವರವನ್ನು ಬೇರೆ ಪತ್ರದಲ್ಲಿ ಲಗತ್ತಿಸಲಾಗಿದೆ.

೨) ೧೯೮೭–೮೮ನೇ ಸಾಲಿನಲ್ಲಿ ೩೩ ಸ್ಥಳಗಳಲ್ಲಿ ಕಿಸಾನ್ ನರ್ಸರಿಗಳ ಮಂಜೂರಾತರ ಸಸಿಗಳನ್ನು ಬೆಳೆಸಲು ಗುರಿ ಹೊಂದಿದೆ.